# ಚಿನ್ನ ಖರೀದಿಗೆ ಸನ್ನದ್ಧರಾಗಿ..



ಚಿನ್ನ ಎಂದಿಗೂ ಆಪತ್ಕಾಲದ ಸಂಪತ್ತು. ವರ್ಷಕ್ಕೊಮ್ಮೆ ಚಿನ್ನದ ಹಬ್ಬ ಬಂದು ಮಹಿಳೆಯರಲ್ಲಿ ಒಡವೆ ಕೊಳ್ಳುವ ಸಂಭ್ರಮ ಹೆಚ್ಚಿದೆ. ಒಂದು ಗ್ರಾಂ ಚಿನ್ನವಾದರೂ ಅಕ್ಷಯ ತದಿಗೆ ದಿನ ಖರೀದಿಸಿದರೆ ಶ್ರೇಷ್ಠ ಎಂಬ ನಂಬಿಕೆ ಇರುವುದರಿಂದ ಆ ದಿನಕ್ಕೆ ಎಲ್ಲಿಲ್ಲದ ಮಹತ್ವವೂ ಬಂದಿದೆ. ಅಂದ ಹಾಗೆ ಏಪ್ರಿಲ್ 18 ಅಕ್ಷಯ ತೃತೀಯ.

★ ಯು.ಅನಂತ್

ಅಕ್ಷಯ ತದಿಗೆ ದಿನ ಚಿನ್ನ ಖರೀದಿ ಮಾಡುವ ಕ್ರೇಜ್ ಇತ್ತೀಚಿನ ವರ್ಷಗಳಲ್ಲಿ ಮಹಿಳೆಯರಲ್ಲಿ ಜೋರಾಗಿದೆ. ಅಂದು ಒಡವೆ ಖರೀದಿಸಿದರೆ ಸಂಪತ್ತು ಸಮೃದ್ಧಿಯಾಗುತ್ತದೆ. ಮುಂದಿನ ಪ್ರತಿ ಕೆಲಸಗಳಲ್ಲೂ ಯಶಸ್ಸು ಸಿಗುತ್ತದೆ ಎಂಬುದು ನಂಬಿಕೆ.

ಇಂದಿನ ಫ್ಯಾಷನ್, ಟ್ರೆಂಡ್, ಮಾರುಕಟ್ಟೆ ಪೈಪೋಟಿ, ವಿನ್ಯಾಸಗಳಲ್ಲಿ ವೈವಿಧ್ಯತೆ.. ಇವೆಲ್ಲವನ್ನೂ ಮನಗಂಡು ಆಭರಣ ಮಳಿಗೆಗಳು ಸಾಕಷ್ಟು ನವನವೀನ ವಿನ್ಯಾಸಗಳ ಒಡವೆಗಳನ್ನು ಸಂಗ್ರಹಿಸಿ ಗ್ರಾಹಕರ ನಿರೀಕ್ಷೆಯಲ್ಲಿದ್ದಾರೆ. ಆ್ಯಂಟಿಕ್, ಎಥ್ನಿಕ್, ಟೆಂಪಲ್, ಟ್ರೆಡಿಷನಲ್..ಹೀಗೆ ಯಾವ ಒಡವೆಯಾದರೂ ಸರಿ, 'ಚಿನ್ನದ ಹಬ್ಬ'ದ ದಿನದ ಖರೀದಿ ಅತ್ಯಂತ ಮಹತ್ವದ್ದು ಎಂದು ಮಹಿಳೆಯರೂ ಒಡವೆ ಖರೀದಿಯತ್ತ ಚಿತ್ತ ಹರಿಸಿದ್ದಾರೆ. ಈ ಬಾರಿ ಏಪ್ರಿಲ್ 18ರಂದು ಅಕ್ಷಯ ತೃತೀಯ.



ಸಾಮಾನ್ಯವಾಗಿ ಎಲ್ಲ ಮಹಿಳೆಯರಿಗೂ ಚಿನ್ನದ ವೈವಿಧ್ಯಮಯ ಒಡವೆ ಬಗ್ಗೆ ವಿಶೇಷ ಆಸಕ್ತಿ, ಒಲವು ಇದ್ದೇ ಇರುತ್ತದೆ. ಯಾವ ಒಡವೆ ಹಾಕಿಕೊಂಡರೆ ಚೆನ್ನಾಗಿ ಕಾಣಬಹುದು, ಮದುವೆಗೆ ಯಾವ ನೆಕ್ಲೇಸ್, ಕಿವಿಯೋಲೆ, ಬಳೆ ಹಾಕಿಕೊಂಡರೆ ಸುಂದರವಾಗಿ ಕಾಣಬಹುದು ಎಂಬ ಲೆಕ್ಕಾಚಾರ ಹಾಕುತ್ತಲೇ ಇರುತ್ತಾರೆ. ಒಡವೆ ಕೊಳ್ಳುವಾಗಲೂ ಅಷ್ಟೇ. ಹೊಸ ಹೊಸ ವಿನ್ಯಾಸಗಳ ಆಭರಣ ಕೊಳ್ಳುವುದರಲ್ಲಿ ಮಹಿಳೆಗೆ ಎಂದೂ ಸಂತೃಪ್ತಿಯ ಮನೋಭಾವವೇ.

'ಉಡುಪಿಗೆ ತಕ್ಕ ಒಡವೆ ಹಾಕಿಕೊಳ್ಳುವುದು ಇಂದಿನ ಟ್ರೆಂಡ್. ನಾವು ಯಾವ ಸಂದರ್ಭಕ್ಕೆ ಯಾವ ತರ ಡ್ರೆಸ್ ಮಾಡಿಕೊಳ್ಳುತ್ತೇವೆ ಎಂಬುದು ಮುಖ್ಯ. ಶುಭ ಸಮಾರಂಭಗಳಿಗೆ ಹೋಗುವಾಗ ಗ್ರ್ಯಾಂಡ್ ಆಗಿರುವ ಸೀರೆ, ಸಲ್ವಾರ್‌ನ್ನೇ ಆಯ್ದುಕೊಳ್ಳುತ್ತೇವೆ. ಸೀರೆಗೆ, ಉಡುಪಿಗೆ ತಕ್ಕ ಹಾಗೆ ಮ್ಯಾಚ್ ಆಗುವಂಥ ಒಡವೆ ತೊಟ್ಟುಕೊಂಡರೆ ಸಖತ್ ಲುಕ್ ಇರುತ್ತದೆ. ಹಾಗೆಯೇ ರಿಸೆಪ್ಷನ್, ಸಿನಿಮಾ, ಪಾರ್ಟಿಗಳಿಗೆ ಹೋಗುವಾಗ ಮಾಡ್ ಆಗಿ ಕಾಣಲೆಂದು ಜೀನ್ಸ್, ಕೋಲ್ಡ್ ಶೋಲ್ಡರ್‌ನಂತಹ ಇತ್ತೀಚಿನ ಫ್ಯಾಷನ್ ಉಡುಗೆಯತ್ತಲೇ ಫ್ಯಾಷನ್‌ಪ್ರಿಯರ ಗಮನವಿರುತ್ತದೆ. ಇಂಥ ಉಡುಪಿಗೆ ತಕ್ಕ ಹಾಗೆ ಅತ್ಯಂತ ಹಗುರವಿರುವ ಆಭರಣ ತೊಡುವುದನ್ನೇ ಮಹಿಳೆಯರು ಇಷ್ಟಪಡುತ್ತಾರೆ. ಈ ನಿಟ್ಟಿನಲ್ಲಿ ಅಕ್ಷಯ ತೃತೀಯ ಒಡವೆ ಸಂಗ್ರಹದಲ್ಲಿ ಮಹಿಳೆಯರ ಮನದಿಂಗಿತ ಅರಿತ ವರ್ತಕರು ಮನಕ್ಕೊಪ್ಪುವ, ಮಧ್ಯಮ ವರ್ಗದವರ ಬಜೆಟ್‌ಗೂ ಸರಿಹೊಂದುವ ಒಡವೆ ಮಾರಲು ನಿರ್ಧರಿಸಿದ್ದೇವೆ' ಎನ್ನುತ್ತಾರೆ ಬೆಂಗಳೂರಿನ ಪವನ್ ಜ್ಯುವೆಲ್ಲರಿಯ ಮಾಲಿಕ ವರುಣ್ ಮಾನೆ.

'ಕೆಲವರು ಒಡವೆಯನ್ನು ಹಾಕಿಕೊಳ್ಳಲೆಂದೇ ಖರೀದಿಸಿದರೆ ಇನ್ನು ಕೆಲವರು ಚಿನ್ನ ಆಪತ್ಕಾಲದ ಆಸ್ತಿ ಎಂದು ಖರೀದಿಸುತ್ತಾರೆ. ಒಡವೆ ಎಂದರೆ ಅದು 'ಲಾಂಗ್ ಟರ್ಮ್ ಇನ್ವೆಸ್ಟ್‌ಮೆಂಟ್' ಎಂಬುದೇ ಬಹುತೇಕ ಮಹಿಳೆಯರ ಅಭಿಪ್ರಾಯ. ಹೀಗಾಗಿ ಕೆಲ ಮಹಿಳೆಯರು ಬೆಲೆ ಬಗ್ಗೆ ಅಷ್ಟಾಗಿ ತಲೆಕೆಡಿಸಿಕೊಳ್ಳದೆ ಹೊಸ ಹೊಸ ವಿನ್ಯಾಸಗಳ ಕಡೆಗೆ ಗಮನಹರಿಸಿ ಖರೀದಿ ಮಾಡಿ ಇಟ್ಟುಕೊಳ್ಳುತ್ತಾರೆ. ಚಿನ್ನದೊಡವೆ ಎಂದಿಗೂ 'ಔಟ್ ಆಫ್ ಫ್ಯಾಷನ್' ಆಗಲ್ಲ ಎಂಬುದೂ ಇದಕ್ಕೆ ಕಾರಣ' ಎನ್ನುತ್ತಾರೆ ಅವರು.

ಆಧುನಿಕ ಮನೋಭಾವದ ಹುಡುಗಿಯರು ಹೆವಿ ಆಗಿರುವ ಒಡವೆಗಳನ್ನು ಹಾಕಿಕೊಳ್ಳಲು ಇಷ್ಟಪಡಲ್ಲ. ಹಗುರವಾಗಿರುವ, ಇಂದಿನ ಫ್ಯಾಷನ್ ಟ್ರೆಂಡ್‌ಗೆ ತಕ್ಕ ಹಾಗೆ ಆಭರಣ ತೊಡುವುದಕ್ಕೇ ಆದ್ಯತೆ ನೀಡುತ್ತಾರೆ. ಇದಕ್ಕಾಗಿ ಚಿನ್ನ, ವಜ್ರ, ಪ್ಲಾಟಿನಂ ಆಭರಣಗಳ ಹಲವು ಸೆಟ್‌ಗಳನ್ನು ತಿಜೋರಿಯಲ್ಲಿ ಇಟ್ಟುಕೊಳ್ಳುತ್ತಾರೆ. ಇದನ್ನು ಸಂದರ್ಭಕ್ಕೆ ತಕ್ಕ ಹಾಗೆ ಬಳಸಿಕೊಳ್ಳುತ್ತಾರೆ. ಸೀರೆ ಉಟ್ಟಾಗ, ಸಲ್ವಾರ್ ಹಾಕಿದಾಗ ಉಡುಗೆಗೆ ತಕ್ಕಂತಹ ಆಭರಣ ತೊಟ್ಟುಕೊಳ್ಳುವುದೂ ಇದೆ. ಸಲ್ವಾರ್ ಹಾಕಿದಾಗ ಚಮಕಿ ರಿಂಗ್, ಬಳೆ ಹಾಕಿ ಹಗುರವಾದ ಪೆಂಡೆಂಟ್ ಇರುವ ಸರ ಅಷ್ಟೇ ಹಾಕಿಕೊಂಡರೆ ಚೆನ್ನಾಗಿರುತ್ತದೆ ಎಂಬುದು ಮಹಿಳೆಯರ ಅಭಿಮತ.

ಚಿನ್ನ, ವಜ್ರದ ಒಡವೆಗಳು ಎಂದಿಗೂ ಶಾಶ್ವತ. ಒಂದು ರೀತಿಯಲ್ಲಿ ಆಪತ್‌ಕಾಲದ ಸಂಗಾತಿಗಳು. ಏನೇ ಹೊಸ ಟ್ರೆಂಡ್, ಡಿಸೈನ್ ಬಂದರೂ ಎಷ್ಟೇ ವರ್ಷಗಳಾದರೂ ಚಿನ್ನದ ಬೇಡಿಕೆ ಕಡಿಮೆಯಾಗಲ್ಲ. ಕೃತಕ ಒಡವೆಗಳು ಎಂದಿಗೂ ಅಪ್ಪಟ ಚಿನ್ನದ ಮುಂದೆ ಶೋಭಿಸಲ್ಲ. ಹೀಗಾಗಿ ಮಹಿಳೆಯರಿಗೆ ಚಿನ್ನ, ವಜ್ರ, ಪ್ಲಾಟಿನಂ ಒಡವೆಗಳತ್ತಲೇ ವಿಶೇಷ ಒಲವು. ಈ ಒಡವೆಗಳನ್ನು ಅಕ್ಷಯ ತದಿಗೆ ದಿನ ಖರೀದಿಸಿದರೆ ಇನ್ನೂ ಶ್ರೇಷ್ಠ ಎಂಬ ನಂಬಿಕೆ ಮಹಿಳೆಯರಲ್ಲಿ ಇರುವ ಕಾರಣ ಈ ದಿನಕ್ಕೆ ವಿಶೇಷ ಮಹತ್ವ ಬಂದಿದೆ. ಏಪ್ರಿಲ್ ಮೇ ಎಂದರೆ ಅದು ಮದುವೆ, ಶುಭ ಕಾರ್ಯಗಳ ಸೀಸನ್ ಕೂಡ ಹೌದು. ಇದೇ ಸಂದರ್ಭದಲ್ಲಿ ಚಿನ್ನದ ಹಬ್ಬವೂ ಬಂದಿದ್ದು ನವವಧುವಿನ ಆಭರಣ ಖರೀದಿಗೆ ಮತ್ತಷ್ಟು ಒತ್ತಾಸೆ ನೀಡಿದಂತಾಗಿದೆ.

ನೆಕ್ಲೆಸ್, ಕಿವಿಯೋಲೆ, ಬಳೆಗಳು, ಉಂಗುರಗಳನ್ನು ಇಂದಿನ ಟ್ರೆಂಡ್‌ಗೆ ತಕ್ಕಂತೆ ಧರಿಸಿದರೆ ಮದುಮಗಳು ಇನ್ನಷ್ಟು ಮಿಂಚಬಹುದು ಎಂಬುದು ಮದುಮಗಳ ಲೆಕ್ಕಾಚಾರವೂ ಆಗಿದೆ.